9. ಸರ್ಕಾರಿ ನಿರ್ಣಯ

ವಿಷಯ: ಸಂವಿಧಾನ (ಎಂಭತ್ನಾಲ್ಕನೇ ತಿದ್ದುಪಡಿ) ವಿಧೇಯಕ, 1999 ಸಂವಿಧಾನ ತಿದ್ದುಪಡಿ ಸಮರ್ಥನೆಗೆ ನಿರ್ಣಯ

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ,

> " ಈ ಸದನವು, ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದಂತೆ ಸಂವಿಧಾನ (ಎಂಭತ್ನಾಲ್ಕನೇ ತಿದ್ದುಪಡಿ) ವಿಧೇಯಕ, 1999 ಕ್ಕೆ ತಿದ್ದುಪಡಿ ಮಾಡಬೇಕೆಂದು ಪ್ರಸ್ತಾಪಿಸಲಾದ ಭಾರತದ ಸಂವಿಧಾನದ 368ನೇ ಅನುಚ್ಛೇದದ (2)ನೇ ಖಂಡದ ಪರಂತುಕದ(ಡಿ) ಖಂಡಕ್ಕೆ ಮಾಡಬೇಕೆಂದು ಉದ್ದೇಶಿಸಲಾದ ತಿದ್ದುಪಡಿಗೆ ಈ ಸದನವು ತನ್ನ ಸಮರ್ಥನೆಯನ್ನು ಕೊಡಬೇಕೆಂದು ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ " ಈ ಸದನವು ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದಂತೆ ಸಂವಿಧಾನ (ಎಂಭತ್ನಾಲ್ಕನೇ ತಿದ್ದುಪಡಿ) ವಿಧೇಯಕ, 1999ಕ್ಕೆ ತಿದ್ದುಪಡಿ ಮಾಡಬೇಕೆಂದು ಪ್ರಸ್ತಾಪಿಸಿದ ಭಾರತದ ಸಂವಿಧಾನದ 368ನೇ ಅನುಚ್ಛೇದನ (2)ನೇ ಖಂಡದ ಪರಂತುಕದ (ಡಿ) ಖಂಡಕ್ಕೆ ಮಾಡಬೇಕೆಂದು ಉದ್ದೇಶಿಸಲಾದ ತಿದ್ದುಪಡಿಗೆ ಈ ಸದನವು ತನ್ನ ಸಮರ್ಥನೆಯನ್ನು ನೀಡುವುದು."

ಅನುಬಂಧ (I)

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಲೋಕಸಭೆ ಮತ್ತು ರಾಜ್ಯದ ವಿಧಾನ ಸಭೆಗಳಲ್ಲಿ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡುವುದಕ್ಕಾಗಿ ಹಾಗೂ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ನಾಮನಿರ್ದೇಶನದ ಮೂಲಕ ಲೋಕಸಭೆ ಮತ್ತು ವಿಧಾನ ಸಭೆಗೆ ಪ್ರಾತಿನಿಧ್ಯ ಕೊಡುವುದಕ್ಕೆ ಸಂಬಂಧಪಟ್ಟ ನಿರ್ದೇಶನದ ಅವಧಿಯು 50 ವರ್ಷಗಳಿಗೆ ಸೀಮಿತವಾಗಿ ಸದರಿ ಅವಧಿಯು ಮುಗಿದು ಹೋಗಿದೆ. ಈ 50 ವರ್ಷಗಳಲ್ಲಿ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಜನರು ಗಮನಾರ್ಹವಾದಂಥ ಪ್ರಗತಿಯನ್ನು ಸಾಧಿಸಿದ್ದರೂ ಸಂವಿಧಾನ ರಚನಾ ಸಭೆಯು ಯಾವ ಉದ್ದೇಶಗಳನ್ನು ಇಟ್ಟುಕೊಂಡು ಈ ಮೀಸಲಾತಿಯನ್ನು ಕೊಟ್ಟಿತ್ತೋ ಆ ಉದ್ದೇಶಗಳು ಪರಿಪೂರ್ಣವಾಗಿ ಇನ್ನೂ ಸಾಧ್ಯವಾಗದೇ ಇರುವುದರಿಂದ ಮತ್ತು ಆಗ ಕೊಟ್ಟಂಥ ಕಾರಣಗಳು ಈಗಲೂ ಇರುವುದರಿಂದ ಇದನ್ನು ಪುನಃ ಇನ್ನೂ ಹತ್ತು ವರ್ಷಗಳ ಕಾಲ ಮುಂದುವರಿಸಬೇಕೆಂದು ಸಂಸತ್ತಿನ ಎರಡೂ ಸದನಗಳು ಒಕ್ಕೊರಲಿನಿಂದ ಈ ನಿರ್ಣಯವನ್ನು ಪಾಸು ಮಾಡಿ ಸಂವಿಧಾನದ

ಅಗತ್ಯಕ್ಕೆ ಕನಿಷ್ಟ ಅರ್ಧ ಭಾಗದ ರಾಜ್ಯಗಳು ಅವುಗಳ ಶಾಸನ ಸಭೆಗಳು ಇದನ್ನು ಒಪ್ಪಿಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಇದು ಇಲ್ಲಿ ಒಪ್ಪಿಗೆಗೆ ಬಂದಿದೆ. ಆದುದರಿಂದ ಅದನ್ನು ನಾನು ಇಲ್ಲಿ ಮಂಡನೆ ಮಾಡಿದ್ದೇನೆ. ಈ ಹಿಂದೆ ಇದ್ದ ಮೀಸಲಾತಿ 2000ನೇ ಇಸವಿಯ ಜನವರಿ ಅದರ ಅವಧಿಯು ಮುಗಿಯುವುದರಿಂದ ನಾವು ಈ ಸದನದಲ್ಲಿ ಅದನ್ನು ಪರಿಶೀಲನೆ ಮಾಡಬೇಕಾಗಿದೆ. ಇದರ ಬಗ್ಗೆ ವಿಶೇಷವಾಗಿ ಹೇಳುವುದಕ್ಕೆ ಯಾವ ಅವಕಾಶ ಇಲ್ಲ. ಸಂಸತ್ತಿನಲ್ಲಿ ಈ ವಿಧೇಯಕವನ್ನು ಎರಡೂ ಸದನಗಳು ಅವಿರೋಧವಾಗಿ ಪಾಸ್ ಮಾಡಿ ಕಳುಹಿಸಿದ್ದಾರೆ. ಅಷ್ಟೇ ಅವಿರೋಧವಾಗಿ ನಾವೂ ಇದನ್ನು ಒಪ್ಪಿಕೊಳ್ಳಬೇಕೆಂದು ಹಾಗೂ ಈ ಉದ್ದೇಶವನ್ನು ಸಾಧಿಸುವುದಕ್ಕಾಗಿ ನಾವು ಏನು ಮಸೂದೆಯನ್ನು ತಂದಿದ್ದೇವೆ, ಆ ನಿರ್ಣಯದ ಮೇಲೆ ಒಪ್ಪಿಗೆಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ.

+ಶ್ರೀ ಜಗದೀಶ ಶೆಟ್ಟರ್ (ವಿರೋಧಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ಲೋಕಸಭೆ ಮತ್ತು ರಾಜ್ಯ ಸಭೆಗಳು ಸರ್ವಾನುಮತದಿಂದ ಪಾಸ್ ಮಾಡಿದಂಥ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡುವುದಕ್ಕೆ ಮತ್ತು ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ನಾಮನಿರ್ದೇಶನದ ಮೂಲಕ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಸಂಬಂಧಪಟ್ಟಂತೆ ಸಂವಿಧಾನಕ್ಕೆ ಏನು ತಿದ್ದುಪಡಿಯಾಗಿದೆ, ಅದಕ್ಕೆ ಈ ಸದನದ ಒಪ್ಪಿಗೆ ಪಡೆಯುವ ಸಲುವಾಗಿ ಅದನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ಇವೊತ್ತು ಸನ್ಮಾನ್ಯ ಬಾಬಾಸಾಹೇಬ್ ಅಂಬೇಡ್ಕರ್‌ರವರು ಈ ಸಂವಿಧಾನವನ್ನು ತಯಾರು ಮಾಡುವಂಥ ಸಂದರ್ಭದಲ್ಲಿ ಈ ಸಮಾಜದಲ್ಲಿದ್ದಂಥ ದಲಿತವರ್ಗ ಮತ್ತು ಶೋಷಿತ ಜನಾಂಗವು ಇನ್ನಿತರ ಸಮಾಜದ ಜೊತೆಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಮಾನವಾಗಿ ಬೆಳೆಯಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಈ ಒಂದು ಮೀಸಲಾತಿ ಯೋಜನೆಯನ್ನು ಸಂವಿಧಾನದಲ್ಲಿ ಸೇರಿಸಿದರೋ, ಅದಕ್ಕೆ 50 ವರ್ಷಗಳ ಅವಧಿಯನ್ನು ಕೊಟ್ಟಿದ್ದರೋ, ಆ 50 ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ನಾವು ಕಂಡುಕೊಂಡರೂ ಯಾವ ಕನಸು ನಮ್ಮಲ್ಲಿತ್ತು ಅದು ಇನ್ನೂ ಒಂದು ಹಂತಕ್ಕೆ ಬಂದಿಲ್ಲ ಮತ್ತು ಮಾನ್ಯ ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಇನ್ನಿತರ ಮಹಾನ್ ವ್ಯಕ್ತಿಗಳು ಸಾಮಾಜಿಕ ನ್ಯಾಯದ ಬಗ್ಗೆ ಚಿಂತನೆ ಮಾಡುವವರು ಏನು ಕನಸನ್ನು ಇಟ್ಟುಕೊಂಡಿದ್ದರು, ಅವರ ಕನಸು ಅಷ್ಟುಮಟ್ಟಿಗೆ ಇನ್ನೂ ನನಸಾಗಿಲ್ಲವೆಂದು ಹೇಳುವ ಮಾತನ್ನು ನಾವು ಒಪ್ಪಿಕೊಳ್ಳುವಂತಾದ್ದಾಗಿದೆ. ಆದಕ್ಕಾಗಿ ಇವೊತ್ತು ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದ ಕೇಂದ್ರ ಸರಕಾರವು ಇದನ್ನು ಮನಗಂಡು ಮತ್ತೆ ಹತ್ತು ವರ್ಷಗಳ ಅವಧಿಗೆ ಮೀಸಲಾತಿಯನ್ನು ಮುಂದುವರಿಸಬೇಕೆಂದು ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಸಂವಿಧಾನಕ್ಕೆ ಏನು ತಿದ್ದುಪಡಿಯನ್ನು ತಂದಿದ್ದಾರೆ ಅದು ಅಲ್ಲಿ ಸರ್ವಾನುಮತದಿಂದ ಪಾಸ್ ಆಗಿರುತ್ತದೆ. ಆದಕ್ಕೆ ಈ ವಿಧಾನಮಂಡಲವು ಸಹಿತ ಸರ್ವಾನುಮತದ ಒಪ್ಪಿಗೆಯನ್ನು ಕೊಡಬೇಕು, ಅದಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರಾದ ಶ್ರೀ ಡಿ.ಬಿ. ಚಂದ್ರೇಗೌಡರು ನಮ್ಮ ರಾಷ್ಟ್ರದ ಉಭಯ ಸದನಗಳು 84ನೇ ಸಂವಿಧಾನ ತಿದ್ದುಪಡಿಯನ್ನು ಮಾಡಿ, ರಾಜ್ಯಗಳ ವಿಧಾನ ಸಭೆಗಳ ಒಪ್ಪಿಗೆಯನ್ನು ಪಡೆಯಲು ಕಳುಹಿಸಿರತಕ್ಕಂಥ

ಈ ಪ್ರಸ್ತಾವನೆಯನ್ನು ನಾವೆಲ್ಲರೂ ಸಂಪೂರ್ಣವಾಗಿ ಸ್ವಾಗತಿಸುತ್ತೇವೆ. ಪಕ್ಷ ಭೇದಗಳನ್ನು ಮರೆತು ಕೇಂದ್ರ ಸರಕಾರವನ್ನು, ಶ್ರೀಮಾನ್ ವಾಜಪೇಯಿಯವರು, ಎನ್‌ಡಿಎ ಸರಕಾರದವರು ಇವ್ಹೊತ್ತು ಅಧಿಕಾರವನ್ನು ತೆಗೆದುಕೊಂಡ ತತ್‌ಕ್ಷಣವೇ, ಈ ಒಂದು ಚರಿತ್ರಾರ್ಹವಾದಂಥ ನಿರ್ಣಯವನ್ನು ತೆಗೆದುಕೊಂಡಿರುವುದಕ್ಕೆ ನಾವೆಲ್ಲರೂ ಸಹಿತ ಪ್ರಾಧನಿಗಳನ್ನು ಮತ್ತು ಕೇಂದ್ರ ಸರಕಾರವನ್ನು ಅಭಿನಂಧಿಸಬೇಕಾಗಿದೆ. ಮಾನ್ಯ ಪ್ರಧಾನಿಗಳು ತೆಗೆದುಕೊಂಡಂಥ ಮೊದಲನೇ ನಿರ್ಣಯವು ಇದಾಗಿದೆ. ರಾಷ್ಟ್ರದಲ್ಲಿ ಸಾಮಾಜಿಕ ನ್ಯಾಯದ ಸವಲತ್ತುಗಳನ್ನು ಎಲ್ಲಾ ವರ್ಗಗಳ ಜನರಿಗೆ ಕೊಡುವ ದೃಷ್ಟಿಯಿಂದ ಅವರು ತೆಗೆದುಕೊಂಡಿರತಕ್ಕಂಥ ನಿರ್ಣಯ ಏನಿದೆ, ಈ ನಿರ್ಣಯವು ನಮ್ಮ ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದಾಗಿ, ಸಾಮಾಜಿಕ ಚಳುವಳಿಯ ಹಿನ್ನಲೆಯಲ್ಲಿ ಮತ್ತು ಸಮಾಜದಲ್ಲಿ ಆಗಿರತಕ್ಕಂಥ ಬದಲಾವಣೆಯ ಹಿನ್ನಲೆಯಲ್ಲಿ ಇದೊಂದು ಅಗತ್ಯವಾಗಿರತಕ್ಕಂಥ ವಿಚಾರವಾಗಿದೆ. ಇದು ನಮ್ಮ ತಿಳುವಳಿಕೆಯನ್ವಯ ತಿದ್ದುಪಡಿ ಆಗಿರತಕ್ಕಂಥಾದ್ದು ಮೊದಲ ಸಾರಿ ಅಲ್ಲ. 1989ನೇ ಇಸವಿಯಲ್ಲಿ ಇದೇ ರೀತಿಯಲ್ಲಿ ಹತ್ತು ವರ್ಷಗಳಿಗೆ ಮುಂದುವರಿಕೆ ಆಗಿದೆ. ಇದು ವಾಸ್ತವಾಂಶದಲ್ಲಿ 2000ನೇ ಇಸವಿ ಜನವರಿಯಿಂದ ಕಾರ್ಯಗತವಾಗತಕ್ಕಂಥಾದ್ದು ಇದೆ.

(ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ದೃಷ್ಟಿಯಿಂದಲೇ ಇದನ್ನು ಮಾಡಿರತಕ್ಕಂಥಾದ್ದು ಇದೆ. ಈ ದೃಷ್ಟಿಯಲ್ಲಿ ನಾವು ಇಡೀ ದೇಶಕ್ಕೆ ಮಾದರಿಯಾಗಿದ್ದೇವೆ. ಸಾಮಾಜಿಕ ನ್ಯಾಯವನ್ನು ಕೊಡತಕ್ಕಂಥ ವಿಚಾರದಲ್ಲಿ ದುರ್ಬಲ ವರ್ಗದವರಿಗೆ, ಹರಿಜನರಿಗೆ, ಗಿರಿಜನರಿಗೆ, ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಡತಕ್ಕಂಥ ವಿಚಾರದಲ್ಲಿ ನಮ್ಮ ರಾಜ್ಯದ ಪ್ರಜಾಪ್ರತಿನಿಧಿ ಸಭೆ ಆದ ಮೇಲೆ, 1947ರ ನಂತರದ ದಿನಗಳಲ್ಲಿಯೂ ಕೂಡ ಬೇರೆ ರಾಜ್ಯಗಳಿಗೆ ನಾವೊಂದು ಮಾದರಿ ರಾಜ್ಯವಾಗಿದ್ದೇವೆ. ಬೇರೆ ರಾಜ್ಯಗಳಲ್ಲಿ ಸಾಮಾಜಿಕವಾದ ನ್ಯಾಯವನ್ನು ಒದಗಿಸಬೇಕೆಂಬ ಸಂದರ್ಭದಲ್ಲಿ ಗುಜರಾತ್ ರಾಜ್ಯದಲ್ಲಿ, ಗಾಂಧೀಜೀಯವರು ಹುಟ್ಟಿದಂಥ ನಾಡಿನಲ್ಲಿ ಅದರ ವಿರುದ್ಧ, ಚಳುವಳಿ ನಡೆದಿರುವುದು ತಮಗೆ ಗೊತ್ತಿದೆ. 15-20 ವರ್ಷಗಳ ಹಿಂದೆ ಅಲ್ಲಿ ಅದಕ್ಕೆ ಅವಕಾಶವನ್ನು ಕೊಡಲಿಲ್ಲ ಎಂಬ ಉದಾಹರಣೆ ನಮ್ಮ ಕಣ್ಣ ಮುಂದಿದೆ. ಮಾನ್ಯ ಕರ್ಪೂರಿ ಠಾಕೂರ್‌ರಂಥ ಒಬ್ಬ ಸಮಾಜದ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹಿಂದುಳಿದ ವರ್ಗಗಳ ಒಬ್ಬ ಧೀಮಂತ ನಾಯಕ ಮುಖ್ಯಮಂತ್ರಿಯಾಗಿದ್ದುದನ್ನು ಈ ಸಮಾಜ ಸಹಿಸಲಿಲ್ಲ. ಇವ್ಹೊತ್ತು ನಮಗೆ ಹೆಮ್ಮೆ ತಂದಂಥ ಒಂದು ವಿಚಾರವೂ ಇದೆ. ಭಾರತದ ರಾಷ್ಟ್ರಪತಿಯವರು ಈ ವರ್ಗಕ್ಕೆ ಸೇರಿದವರು ಎಂದು ಹೇಳುವಾಗ ನಾವೆಲ್ಲರೂ ತುಂಬಾ ಅಭಿಮಾನ ಪಡುತ್ತೇವೆ. ಈ ಪ್ರಪಂಚದಲ್ಲಿಯೇ ಇಂಥ ಒಂದು ಪ್ರಜಾಪ್ರಭುತ್ವದ ಮಾದರಿ ರಾಷ್ಟ್ರ ನಮ್ಮದು ಎಂದು ಹೇಳಿಕೊಳ್ಳಲು ನಾವೆಲ್ಲರೂ ಹೆಮ್ಮೆಪಟ್ಟುಕೊಳ್ಳಬಹುದಾಗಿದೆ. ನಮ್ಮ ರಾಷ್ಟ್ರದ ಇತಿಹಾಸದ 50 ವರ್ಷಗಳ ಅವಧಿಯಲ್ಲಿ ಇಷ್ಟರಮಟ್ಟಿಗೆ ನಾವು ಸಾಧನೆಗಳನ್ನು ಮಾಡಿದ್ದರೂ ಕೂಡ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ನಾವು ಇನ್ನೂ ಶ್ರಮಿಸಬೇಕು ಮತ್ತು ಶೋಷಣೆಗೊಳಗಾಗಿದ್ದ ವರ್ಗಗಳ ಬಗ್ಗೆ ಇನ್ನೂ ಸವಲತ್ತುಗಳನ್ನು ಮೀಸಲಿಡಬೇಕು ಎಂಬ ಅರಿವು ನಮ್ಮೆಲ್ಲರಿಗೂ ಇದೆ. ಈ ವರ್ಗಗಳ ಜನರಿಗೆ ನಮ್ಮ ಅಚ್ಚುಮೆಚ್ಚಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸ್‌ರವರು ಮಾಡಿದ ಕೆಲಸಕಾರ್ಯಗಳನ್ನು ಎಲ್ಲರೂ

ಜ್ಞಾಪಿಸಿಕೊಳ್ಳಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ನಮ್ಮ ಸಭೆಯಲ್ಲಿಯೂ ಕೂಡ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ಮೀಸಲಾತಿಯ ಅವಕಾಶ ಮಾಡಿಕೊಟ್ಟಿರುವುದು ಎಲ್ಲರ ಗಮನದಲ್ಲಿರುವ ವಿಚಾರವಾಗಿದೆ.

5.30 ಪಿ.ಎಂ.

ಮತ್ತೆ ಹಿಂದುಳಿದ ವರ್ಗಗಳ ಬಗ್ಗೆ ಮಂಡಲ ಆಯೋಗದ ವರದಿ ಜಾರಿಗೆ ತರುವ ಮುಂಚೆ ಇದ್ದ ಪರಿಸ್ಥಿತಿ ನೋಡಿದರೆ ಅನಂತರ ರಾಷ್ಟ್ರದ ರಾಜಕಾರಣವೇ ಬದಲಾವಣೆಯಾಯಿತು. ಒಂದು ಸಂದರ್ಭದಲ್ಲಿ ಕೆಲವು ರಾಜಕೀಯ ಪಕ್ಷಗಳು ಹಿಂದುಳಿದ ವರ್ಗಗಳ ಗುತ್ತಿಗೆ ಹಿಡಿದಿದ್ದುದು ಸಹ ಇತ್ತು. ಆದರೆ ಮಂಡಲ ಆಯೋಗದ ವರದಿಯ ಅನುಷ್ಠಾನಕ್ಕೆ ಅವರು ಏನೂ ಪ್ರಯತ್ನಿಸಲಿಲ್ಲ. ಅದನ್ನು ನಮ್ಮ ಪಕ್ಷದ ಸರ್ಕಾರವೇ ಕೇಂದ್ರದಲ್ಲಿ ಜಾರಿಗೆ ತರಬೇಕಾಯಿತು. ಇನ್ನು ಇಲ್ಲಿ ಕರ್ನಾಟಕವನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ ಉತ್ತರಭಾರತದ ಕೆಲವು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಜನರಿಗೆ ಆಗುತ್ತಿರುವ ಅನ್ಯಾಯ ನೋಡಿದರೆ ಸಹಿಸಿಕೊಳ್ಳಲಿಕ್ಕೂ ಆಗುವುದಿಲ್ಲ. ನಮ್ಮ ರಾಜ್ಯದಲ್ಲೂ ಕೂಡ 70ರ ದಶಕದ ಈಚೆಗೆ ಕಳೆದ 25-26 ವರ್ಷಗಳಲ್ಲಿ ಹಳ್ಳಿಗಳಲ್ಲಿ ಬಹಳ ಬದಲಾವಣೆಯಾಗಿದೆ. ಹಿಂದೆ ನಾವು ತಲೆತಗ್ಗಿಸುವ ಪರಿಸ್ಥಿತಿ ಏನು ಇತ್ತು, ಅವರು ಸಾರ್ವಜನಿಕ ಸ್ಥಳದಿಂದ ನೀರು ತೆಗೆಯಬಾರದು, ಹೋಟೆಲಿನೊಳಗೆ ಹೋಗಬಾರದು, ಹಜಾಮ ಕ್ಷೌರ ಮಾಡುವುದಿಲ್ಲ ದೇವಸ್ಥಾನಗಳಿಗೆ ಹೋಗಬಾರದೆಂಬ ಅನಿಷ್ಟ ಪದ್ಧತಿಗಳೆಲ್ಲ ಇದ್ದುದು ಇವತ್ತು ಸಾಕಷ್ಟು ಕಡಿಮೆಯಾಗಿದ್ದು ಸಮಾಜದಲ್ಲಿ ಒಟ್ಟಾರೆ ಅರಿವು ನಾಗರೀಕ ಪ್ರಶ್ನೆ ಬರುತ್ತಿದೆ. ಆದರೆ ಇನ್ನೂ ಸಾಧಿಸಬೇಕಾದದ್ದು ಬಹಳ ಇದೆ. ಮಾನ್ಯ ಬಾಬಾಸಾಹೇಬ ಅಂಬೇಡ್ಕರರ ವಿಚಾರ ಆದರ್ಶಗಳಿಗೆ ಸ್ವಲ್ಪಮಟ್ಟಿನ ಮಾನ್ಯತೆಯಾದರೂ ಸಿಗುತ್ತಿದೆ. ಸಮಾಜಕಲ್ಯಾಣ ಇಲಾಖೆಗೆ ಕಾಗೋಡು ತಿಮ್ಮಪ್ಪನವರೇ ಸಚಿವರು, ಆ ಇಲಾಖೆಯ ಹಲವಾರು ಕಾರ್ಯಕ್ರಮಗಳಿವೆ, ಅದಕ್ಕೆ ಸಾಕಷ್ಟು ಹಣ ಕೊಡುತ್ತೇವೆ. ಆದರೆ ಸಮಾಜದಿಂದ ವಂಚಿತರಾದ ಜನರಿಗೆ ಇವತ್ತು ನಾಯಕತ್ವ ಒದಗಿಸಿಕೊಡಬೇಕಾಗಿದೆ. ಆ ಜನಗಳಿಗಾಗಿ ನಮ್ಮ ಸರ್ಕಾರ ಇದ್ದಾಗ ಲಕ್ಷಾಂತರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದು ದಾಖಲೆಯಲ್ಲಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ನೀವು ಅವರಿಗೆ ಇಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವತ್ತ ಹೆಚ್ಚು ಚಿಂತನೆ ಮಾಡಬೇಕಾಗಿದೆ, ನಾನು ಯಾಕೆ ಇದನ್ನು ಹೇಳುತ್ತೇನೆಂದರೆ, ನೀವು ಒಂದು ಹೋರಾಟದ ಹಿನ್ನೆಲೆಯಲ್ಲಿ ಬಂದವರು. ಭೂಸುಧಾರಣೆ ಚಳುವಳಿ ಮೂಲಕ ನಾಯಕರಾದವರು. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಗಳ ಕಾರ್ಯಕ್ರಮಗಳಿಗೆ ನೀವು ಹೆಚ್ಚು ಒತ್ತು ಕೊಡುವ ಮೂಲಕ ಹೊಸ ವಾತಾವರಣ ಸೃಷ್ಟಿಸಬೇಕಾಗಿದೆ. ಮಾನ್ಯ ಖರ್ಗೆಯವರು ವಿರೋಧಪಕ್ಷದಲ್ಲಿದ್ದಾಗಲೂ ಅವರ ಅನೇಕ ವಿಚಾರಗಳನ್ನು ನಾವು ಮೆಚ್ಚಿ ಅದನ್ನು ವ್ಯಕ್ತಪಡಿಸಿಯೂ ಇದ್ದೇವೆ. ದೇಶದ ಒಟ್ಟು ಜನಸಂಖ್ಯೆಯ ಶೇಕಡ 23-24 ರಷ್ಟು ಪ್ರಮಾಣದ ಜನಸಂಖ್ಯೆ ಇರುವ ಈ ವರ್ಗದಿಂದ ಒಬ್ಬ ಮುಖ್ಯಮಂತ್ರಿಯನ್ನು ಇವತ್ತಿಗೂ ಮಾಡಲು ನಮ್ಮಿಂದ ಆಗಲಿಲ್ಲ. ಕಾರಣಗಳು ಏನೇನೋ ಇರಬಹುದು, ಅವರಿಗೆ ಅರ್ಹತೆ ಯೋಗ್ಯತೆ ಎಲ್ಲಾ ಇದೆ, ಆದರೂ ಇವತ್ತು ಅವರನ್ನು ಮುಖ್ಯಮಂತ್ರಿಯೆಂದು ಒಪ್ಪಿಕೊಳ್ಳುವುದಕ್ಕೆ ಸಮಾಜ ಇನ್ನೂ ತಯಾರಿಲ್ಲ. ಆದ್ದರಿಂದ ಆ ವರ್ಗದ ಜನರಿಗೆ ಅನುಕೂಲಗಳಾಗಬೇಕೆಂಬ ದೃಷ್ಟಿಯಿಂದ ಕೇವಲ 10 ವರ್ಷವಷ್ಟೇ ಮೀಸಲಾತಿ ಅಲ್ಲ ಎಲ್ಲಿಯವರೆಗೆ ಸಮಾಜದಲ್ಲಿ ಅಸ್ಪೃಶ್ಯತೆ ಇರುತ್ತದೋ ಅಲ್ಲಿಯವರೆಗೆ

ಮೀಸಲಾತಿಯನ್ನು ಮುಂದುವರೆಸುವ ಅವಶ್ಯಕತೆ ಇದೆ. ಇದು ವಾಸ್ತವಿಕತೆ, ಇದನ್ನು ಮರೆತ ಯಾರೂ ಈ ದೇಶದಲ್ಲಿ ನ್ಯಾಯ ಒದಗಿಸಲು ಸಾಧ್ಯವಿಲ್ಲ. ನಮ್ಮ ಕಾಲದಲ್ಲಿ ಪುರಸಭೆಗಳಲ್ಲಿ, ನಗರಸಭೆಗಳಲ್ಲಿ ಕಾರ್ಪೊರೇಷನ್‌ಗಳಲ್ಲಿ ಶೇಕಡ 18ರಷ್ಟು ಪ್ರಾತಿನಿಧ್ಯ ಏನಿದೆ ಅದರ ಜೊತೆಗೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಿಗೂ ಮೀಸಲಾತಿಯನ್ನು ವಿಸ್ತರಿಸಿದೆವು. ಇದರ ಬಗ್ಗೆ ಸೂಕ್ತ ಕಾಲದಲ್ಲಿ ಚರ್ಚೆ ಮಾಡೋಣ. ಈ ಸಂದರ್ಭದಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಒಂದು ವಿಷಯದ ಬಗ್ಗೆ ಗಮನಹರಿಸಬೇಕಾಗಿದೆ. ಅದು ರಾಜ್ಯದ ಹಿತದೃಷ್ಟಿಯಿಂದ ಬಹಳ ಮುಖ್ಯವಾದುದು. ಅದೇನೆಂದರೆ ಅನೇಕ ಪತ್ರಿಕೆಗಳಲ್ಲಿ ಇದು ಪ್ರಕಟವಾಗಿದೆ. ಅಸೆಂಬ್ಲಿ ಕ್ಷೇತ್ರಗಳ ಡೀಲಿಮಿಟೇಷನ್ ವಿಚಾರ 2000 ಇಸವಿ ಜನವರಿಯಿಂದ ಆಗಬೇಕಾಗುತ್ತದೆ. ಹಾಲಿ ಅಸೆಂಬ್ಲಿ ಕ್ಷೇತ್ರಗಳ ಜನಸಂಖ್ಯೆ ಪ್ರಮಾಣದಲ್ಲಿ ವಿಪರೀತ ವ್ಯತ್ಯಾಸಗಳಿರುವುದು ನಮಗೆ ಗೊತ್ತಿದೆ. ಉತ್ತರಹಳ್ಳಿ, ವರ್ತೂರು ಕ್ಷೇತ್ರಗಳಲ್ಲಿ 9 ರಿಂದ 10 ಲಕ್ಷ ಮತದಾರರಿದ್ದರೆ ಕೇವಲ 90-95 ಸಾವಿರ ಮತದಾರರಿರುವ ಕ್ಷೇತ್ರಗಳೂ ಇವೆ. ಈಗ ಕ್ಷೇತ್ರಗಳ ಪುನರ್ವಿಂಗಡಣೆ ಮಾಡುವಾಗ ವಾಸ್ತವಿಕ ಜನಸಂಖ್ಯೆಯನ್ನು ಆಧರಿಸಿ ಚಿಕ್ಕ ಹಾಗೂ ಚೊಕ್ಕ ಕ್ಷೇತ್ರಗಳನ್ನು ರಚಿಸಬೇಕು, ಹಾಗೆ ಮಾಡುವಾಗ ಮೀಸಲಾತಿ ಕ್ಷೇತ್ರಗಳನ್ನೂ ಜನಸಂಖ್ಯೆ ಆಧರಿಸಿಯೇ ನಿಗದಿಪಡಿಸಬೇಕು. ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆಯೇ ಅಲ್ಲಿ ಇಲ್ಲಿ ಮಾತನಾಡುವುದು ನನಗೆ ಗೊತ್ತಿರುವ ಪ್ರಕಾರ ಹಾಲಿ ಇರುವ ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಒಂದು ಕ್ಷೇತ್ರ ಕಡಿಮೆ ಆಗುವುದಂತೆ, ಇದು ನಿಜವೇ? ವಿಧಾನಸಭಾ ಕ್ಷೇತ್ರಗಳನೇನೋ 500 ರವರೆಗೂ ವಿಸ್ತರಿಸಬಹುದು, ಆದರೆ ಪಾರ್ಲಿಮೆಂಟಿನಲ್ಲಿ ಒಂದು ಸೀಟು ಕಡಿಮೆಯಾಗುತ್ತದೆಂದು ಕೇಳಿದ್ದೇನೆ. ತಾವು ಗಮನಕೊಟ್ಟು ಇದನ್ನು ನೋಡಬೇಕಾಗಿದೆ. ಹಾಗೆಯೇ ಆಂಗ್ಲೋ ಇಂಡಿಯನ್ ರೆಪ್ರೆಸೆಂಟೆಟಿವ್ ಅನ್ನು ಇವತ್ತಿನವರೆಗೂ ನಿಮ್ಮಿಂದ ಮಾಡಲು ಆಗಲಿಲ್ಲ, ಯಾಕೆ? ನೀವು ಯಾರನ್ನು ಬೇಕಾದರೂ ಮಾಡಿಕೊಳ್ಳಿ. ಕೆಲವು ತೀರ್ಮಾನಗಳನ್ನು ನೀವು ಚುರುಕಾಗಿ ತೆಗೆದುಕೊಳ್ಳಬೇಕಾಗುತ್ತದೆ, ಇಲ್ಲದೇ ಹೋದರೆ ನಿಮ್ಮ ಮೇಲೆ ಅನಗತ್ಯ ಒತ್ತಡ ಟೀಕೆಗಳಿಗೆ ಕಾರಣವಾಗುತ್ತದೆ. ಆಂಗ್ಲೋ ಇಂಡಿಯನ್ ಪ್ರತಿನಿಧಿ ಇಲ್ಲದಿರುವುದರಿಂದ ಆ ವರ್ಗದ ಜನರಿಗೆ ಸದನದಲ್ಲಿ ಪ್ರಾತಿನಿಧ್ಯ ಇಲ್ಲದಂತಾಗಿದೆ. ಮೀಸಲಾತಿ ಯಾಕೆ ಬೇಕು ಎಂಬುದನ್ನು ನಾವು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಹಾಲಿ ಕೇಂದ್ರಸರ್ಕಾರದ ಎರಡೂ ಸದನಗಳು ಅವಿರೋಧವಾಗಿ ಪಾಸು ಮಾಡಿರುವ ಈ ನಿರ್ಣಯವನ್ನು ನಾವು ಒಂದೇ ಮನಸ್ಸಿನಿಂದ ಅವಿರೋಧವಾಗಿ ಪಾಸು ಮಾಡಿಕೊಡಬೇಕಾದ ನೈತಿಕ ಜವಾಬ್ದಾರಿ ನಮ್ಮ ಮೇಲಿದೆ. ಈಗ ತಾವು ಮಂಡಿಸಿರುವ ನಿರ್ಣಯವನ್ನು ಏಕಮನಸ್ಸಿನಿಂದ ನಾನು ಸ್ವಾಗತ ಮಾಡುತ್ತೇನೆ.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರುವ ಈ ನಿರ್ಣಯವನ್ನು ಬೆಂಬಲಿಸಿ ನಾನು ಕೆಲವು ಮಾತುಗಳನ್ನು ಆಡಲು ಬಯಸುತ್ತೇನೆ. ಈಗ ತಂದಿರುವ ನಿರ್ಣಯದಂತೆ ಮುಂದಿನ 10 ವರ್ಷಗಳಿಗೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಆಂಗ್ಲೋ ಇಂಡಿಯನ್ ವರ್ಗಕ್ಕೆ ಪ್ರಾತಿನಿಧ್ಯ ಮುಂದುವರೆಸಬೇಕೆಂಬ ತೀರ್ಮಾನ ಏನಿದೆ ಅದನ್ನು ಇನ್ನು ಮುಂದಿನ 50 ವರ್ಷಗಳಿಗಾದರೂ ವಿಸ್ತರಿಸುವ ಅವಶ್ಯಕತೆ ಇದೆ. ಗ್ರಾಮೀಣ ಪ್ರದೇಶಗಳಿಗೆ ಹೋದರೆ ಅಲ್ಲಿನ ವಿಷಮ ಸ್ಥಿತಿ ಹೇಗಿದೆ ಎಂಬುದು ಗೊತ್ತಾಗುತ್ತದೆ. ನಾನೇ

ಇತ್ತೀಚೆಗೆ ನನ್ನ ಕ್ಷೇತ್ರದ ಒಂದು ಸಮಾರಂಭಕ್ಕೆ ಹೋಗಿದ್ದೆ. ನಾನು ಬಹಳ ನೊಂದ ಮನಸ್ಸಿನಿಂದ ಇದನ್ನು ಹೇಳುತ್ತಿದ್ದೇನೆ. ಗ್ರಾಮ ಸಂಪರ್ಕ ಸಭೆ ನಡೆಸಲೆಂದು ಒಂದು ಗ್ರಾಮಕ್ಕೆ ಹೋದೆ. ಅಲ್ಲಿ ಒಬ್ಬ ಹರಿಜನ ದೇವಸ್ಥಾನದೊಳಕ್ಕೆ ಬರಬಾರದೆಂದು ಅಲ್ಲಿನ ಸಾಮಾನ್ಯ ಜನ ತಿಳಿಸಿದರು ಆದರೆ ನಾನು ಅಲ್ಲಿ ಹೇಳಿದೆ, ಆತನೇ ಬಂದು ನನಗೆ ಹೂಮಾಲೆ ಹಾಕಿದರೆ ಮಾತ್ರ ನಾನು ಸಮಾರಂಭದಲ್ಲಿ ಭಾಗವಹಿಸುತ್ತೇನೆ ಎಂದು. ಈ ರಾಜ್ಯದೊಳಗಿನ ಪರಿಸ್ಥಿತಿಗೆ ಇದು ಹಿಡಿದ ಕನ್ನಡಿ. ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದವರನ್ನು ಇನ್ನೂ ಕೂಡ ನಾವು ಸುಧಾರಿಸುವುದಕ್ಕೆ ಸಾಧ್ಯ ಆಗಿಲ್ಲ ಎಂಬ ನೋವು ಇದೆ. ನಮ್ಮ ಕರ್ನಾಟಕ ರಾಜ್ಯಕ್ಕೆ ಒಂದು ಇತಿಹಾಸ ಇದೆ, ಸಂಪ್ರದಾಯ ಇದೆ. 12ನೇ ಶತಮಾನದಲ್ಲಿ ಮಾನ್ಯ ಬಸವಣ್ಣನವರು ಬೆಳೆಸಿದಂತಹ ರಾಜ್ಯ, ತದನಂತರ ಮಾನ್ಯ ದೇವರಾಜ್ ಅರಸ್ ಅವರು ರಾಜ್ಯ ನಡೆಸಿದಂತಹ ರಾಜ್ಯ. ಅವರು ಹಿಂದುಳಿದ ವರ್ಗದವರ ಬಗ್ಗೆ ಕಳಕಳಿ ಹೊಂದಿ ಅವರಿಗೆ ಕೊಟ್ಟ ಸಮಾನತೆಯನ್ನು ನಾವು ಪ್ರಶಂಸೆ ಮಾಡಿದೆವು. ಹಿಂದೆ ಅವರಿಗೆ ಏನು ಸಮಾನತೆ ಇತ್ತು, ಅದಕ್ಕೆ ಇವತ್ತು ಒಂದು ತಿದ್ದುಪಡಿಯನ್ನು ತಂದಿರುವುದು ಬಹಳ ಶ್ಲಾಘನೀಯ, ಇದು ಇನ್ನೂ ತೀವ್ರತೆಯಲ್ಲಿ ಬಂದಿದ್ದರೆ ಒಳ್ಳೆಯದಿತ್ತು. ಇದು ಜನವರಿ 2000 ವರ್ಷದ 25ನೇ ದಿನಾಂಕದಂದು ಜಾರಿಗೆ ಬರತಕ್ಕದ್ದು ಎಂದು ಸಂವಿಧಾನ ಎಂಭತ್ತನಾಲ್ಕನೇ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ. ಇದು ತತ್‌ಕ್ಷಣ ಜಾರಿಗೆ ಆಗಬೇಕಾಗಿತ್ತು. ಆದರೂ ಈಗ ತಂದಿರುವುದು ಸಂತೋಷದ ವಿಚಾರ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಸಂಸದೀಯ ವ್ಯವಹಾರ, ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ಇದರಲ್ಲಿ ಚರ್ಚೆ ಮಾಡುವುದಕ್ಕೆ ಬಹಳಷ್ಟು ವಿಷಯ ಇದೆ. ಇದರ ಬಗ್ಗೆ ಎಷ್ಟು ಬೇಕಾದರೂ ಚರ್ಚೆ ಮಾಡಬಹುದು. ಆದರೆ ಇವತ್ತು ತಂದಿರತಕ್ಕ ವಿಧೇಯಕದ ಬಗ್ಗೆ ಅಷ್ಟೊಂದು ಚರ್ಚೆ ಅವಶ್ಯಕತೆ ಇಲ್ಲ. ಯಾವ ಉದ್ದೇಶದಿಂದ ನಾವು ಚರ್ಚೆ ಮಾಡುತ್ತಿದ್ದೇವೆ, ಆ ಉದ್ದೇಶ ಸಾಧನೆಗಾಗಿ ಈ ವಿಧೇಯಕವನ್ನು ತಂದಿದ್ದೇವೆ. ಮಾನ್ಯ ಸಿಂಧ್ಯರವರು ಪ್ರಸ್ತಾಪ ಮಾಡುತ್ತಾ ಮೀಸಲಾತಿ ವಿಚಾರದಲ್ಲಿ ಕರ್ನಾಟಕ ಒಂದು ಮಾದರಿ ರಾಜ್ಯ ಆಗಿದೆ ಎಂದು ಹೇಳಿದ್ದಾರೆ. ಇದನ್ನು ಒಪ್ಪಿಕೊಳ್ಳುವುದರ ಜೊತೆಗೆ ಮೀಸಲಾತಿ ಎಲ್ಲ ಶೋಷಿತ ವರ್ಗಗಳಿಗೆ ಸಿಗಬೇಕು ಎಂಬ ದೃಷ್ಟಿಯಿಂದ ನಾವು ಹಿಂದುಳಿದ ವರ್ಗದವರಿಗೆ ಮೀಸಲಾತಿ ಮತ್ತು ವಿಶೇಷವಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡುವುದಕ್ಕೆ ಮತ್ತು ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ನಾಮನಿರ್ದೇಶನದ ಮೂಲಕ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಈ ವಿಧೇಯಕ ತಂದಿದ್ದೇವೆ. ಆಂಗ್ಲೋಇಂಡಿಯನ್ ಸಮುದಾಯಕ್ಕೆ ನಾಮನಿರ್ದೇಶನ ಕೊಡುವುದರಲ್ಲಿ ಸ್ವಲ್ಪ ತಡ ಆಗಿದೆ ಎನ್ನುವ ಅವರ ಆತಂಕ ಏನು ಇದೆ, ಅವರ ಆತಂಕದ ಜೊತೆ ನಾನೂ ಶೇರ್ ಮಾಡುತ್ತೇನೆ. ಅದಕ್ಕೆ ಬೇರೆ ಕಾರಣಗಳು ಇಲ್ಲ. ನಾವು ನೀವು ಎಲ್ಲರೂ ಕುಳಿತು ಚರ್ಚೆ ಮಾಡೋಣ. 2-3 ಹೆಸರುಗಳು ಚಾಲನೆಯಲ್ಲಿದೆ. ಅದನ್ನು ಶೀಘ್ರವಾಗಿ ಸೆಟಲ್ ಮಾಡೋಣ. ಸಂವಿಧಾನದ 334ನೇ ಅನುಚ್ಛೇದದಲ್ಲಿ ಪ್ರಸ್ತಾಪಿಸಿರುವಂತೆ ನಮ್ಮ ರಾಜ್ಯಾಂಗದ 334ನೇ ವಿಧಿಗೆ ತಿದ್ದುಪಡಿ ಮಾಡಿ ಇನ್ನೂ ಹತ್ತು ವರ್ಷಗಳ ಕಾಲ ಮೀಸಲಾತಿ ಮುಂದುವರಿಸಲು, ಆ ಉದ್ದೇಶ ಸಾಧನೆಗೆ ಈ ವಿಧೇಯಕವನ್ನು ಮಂಡನೆ ಮಾಡಲಾಗಿದೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ " ಈ ಸದನವು ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದಂತೆ ಸಂವಿಧಾನ (ಎಂಭತ್ತ ನಾಲ್ಕನೇ ತಿದ್ದುಪಡಿ) ವಿಧೇಯಕ, 1999ಕ್ಕೆ ತಿದ್ದುಪಡಿ ಮಾಡಬೇಕೆಂದು ಪ್ರಸ್ತಾಪಿಸಲಾದ ಭಾರತದ ಸಂವಿಧಾನದ 368ನೇ ಅನುಚ್ಛೇದದ (2)ನೇ ಖಂಡದ ಪರಂತುಕದ (ಡಿ) ಖಂಡಕ್ಕೆ ಮಾಡಬೇಕೆಂದು ಉದ್ದೇಶಿಸಲಾದ ತಿದ್ದುಪಡಿಗೆ ಈ ಸದನವು ತನ್ನ ಸಮರ್ಥನೆಯನ್ನು ನೀಡುವುದು "

ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ಶ್ರೀ ಡಿ.ಎ. ಸದಾನಂದ ಗೌಡ: ಮಾನ್ಯ ಸಹಕಾರ ಸಚಿವರಾದಂತಹ ಶ್ರೀ ಶಿವಕುಮಾರ್ ಅವರು ಇಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದರು. ಅವರು ಹೇಳಿಕೆಯನ್ನು ಇನ್ನೂ ಮಾಡಲಿಲ್ಲ.

ಅಧ್ಯಕ್ಷರು: ಮಾನ್ಯ ಸುಬ್ಬಾರೆಡ್ಡಿಯವರ ಒಂದು ಪ್ರಸ್ತಾವಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಂತ್ರಿಯವರಿಂದ ಒಂದು ಹೇಳಿಕೆ ಆಗುತ್ತದೆ. ಆ ನಂತರ ಸಹಕಾರ ಸಚಿವರಾದ ಮಾನ್ಯ ಶಿವಕುಮಾರ್ ಅವರು ಹೇಳಿಕೆ ಮಾಡುತ್ತಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯರುಗಳು ತಮ್ಮ ಬೇಡಿಕೆಗಾಗಿ ಸ್ಟ್ರೈಕ್ ಮಾಡುತ್ತಿದ್ದಾರೆ. ಅವರನ್ನು ಕರೆಸಿ ಅವರು ತಮ್ಮ ಸ್ಟ್ರೈಕನ್ನು ಹಿಂತೆಗೆದುಕೊಳ್ಳುವಂತೆ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡುತ್ತೇನೆ.